ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.ಃ 438/2016

ಪಿ. ಡಬ್ಲ್ಯು: 02
ಸಿ. ಡಬ್ಲ್ಯು: 01

ಸಾಕ್ಷಿದಾರರ ಹೆಸರು : ಪ್ರೇಮ
ತಂದೆ/ಪತಿಯ ಹೆಸರು : ಮಂಜುನಾಥ
ವಯಸ್ಸು : 28 ವರ್ಷ
ವೃತ್ತಿ : ಗೃಹಿಣಿ
ವಾಸ : ಹಾರೋಹಳ್ಳಿ

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ
25.10.2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಆರೋಪಿ-1 ನನ್ನ ಗಂಡ. ಆರೋಪಿ-2 ನನ್ನ ಅತ್ತೆ. ನನಗೆ ಮದುವೆ ಆಗಿ ಸುಮಾರು 10 ವರ್ಷಗಳಾಯಿತು. ನನಗೆ ಇಬ್ಬರು ಮಕ್ಕಳಿರುತ್ತಾರೆ. ಅವರಲ್ಲಿ ಒಬ್ಬನಿಗೆ 10 ವರ್ಷ, ಇನ್ನೊಬ್ಬನಿಗೆ 7 ವರ್ಷಗಳಾಗಿರುತ್ತದೆ. ಮದುವೆಯಾಗಿ ಸ್ವಲ್ಪ ವರ್ಷಗಳ ಕಾಲ ನನ್ನನ್ನು 1 ನೇ ಆರೋಪಿ ಚೆನ್ನಾಗಿ ನೋಡಿಕೊಂಡಿದ್ದರು. ನಂತರ ನನಗೆ ಹೊಡೆಯುವುದು ಹಾಗೂ ಬೈಯುವುದನ್ನು ಮಾಡುತ್ತಿದ್ದರು ಅದರಿಂದ ನನಗೆ ಮಾನಸಿಕವಾಗಿ ತೊಂದರೆ ಆಗುತ್ತಿತ್ತು. ನನ್ನ ಮದುವೆ ಕಾಲಕ್ಕೆ 1 ನೇ ಆರೋಪಿತನಿಗೆ ರೂ.50,000/- ನಗದು ಹಣವನ್ನು, ವಾಚ್, ಬಟ್ಟೆಗಳು, ಓಲೆ, Earrings ಗಳನ್ನು ವರದಕ್ಷಿಣೆಯಾಗಿ ನೀಡಲಾಗಿತ್ತು. ವರದಕ್ಷಿಣೆ ಹೆಚ್ಚಿಗೆ ಬೇಕು ಎಂದು ಯಾವುದೇ ಕಾರಣವಿಲ್ಲದೇ ನನಗೆ ಹೊಡೆಯುತ್ತಿದ್ದರು.

ದಿಃ 03.10.2016 ರಂದು ಮಧ್ಯಾಹ್ನ 01.30 ಗಂಟೆ ಸಮಯದಲ್ಲಿ ಬೆಳಗೊಳದಲ್ಲಿರುವ ನಮ್ಮ ವಾಸದ ಮನೆಯಲ್ಲಿ ಆರೋಪಿತರು ಜಗಳ ಮಾಡಿ ನನಗೆ 1 ನೇ ಆರೋಪಿತ ನನ್ನ ಕೆನ್ನೆಗೆ , ತಲೆಗೆ ಹಾಗೂ ಭುಜಗಳಿಗೆ ಕೈಗಳಿಂದ ಹಾಗೂ ಕಡ್ಡಿಯಿಂದ ಹೊಡೆದರು. ನಂತರ ನಾನು ನನ್ನ ತಂದೆ ಮನೆಯಾದ ಹಾರೋಹಳ್ಳಿಯ ಮನಗೆ ಹೋಗಿರುತ್ತೇನೆ. ನಂತರ ಸ್ವಲ್ಪ ದಿನ ನಾನು ಕಾದಿದ್ದು ಗಲಾಟೆ ಸಂಬಂಧ ಪಂಚಾಯಿತಿ ಸಹ ಸೇರಿಸಿದ್ದು ಅದಕ್ಕೂ ಸಹ ಅರೋಪಿತರು ಬಂದಿರುವುದಿಲ್ಲ. ನಂತರ ನಾನು

ದಿ:26.10.2016 ರಂದು ಕೆ.ಆರ್.ಎಸ್. ಪೋಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರು ನೀಡಿರುತ್ತೇನೆ.

ಸಾಕ್ಷಿ ತಾನು ನೀಡಿದ್ದ ದೂರನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ.2 ಎಂದು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.2.ಎ. ಎಂದು ಗುರುತಿಸಲಾಯಿತು. ದೂರು ನೀಡಿದ 3-4 ದಿನಗಳು ಆದ ಮೇಲೆ ಪೋಲೀಸರು ನಾನು ತೋರಿಸಿದ ಜಾಗದಲ್ಲಿ ಬೆಳಗೊಳದ ವಾಸದ ಮನೆಗೆ ಬಂದು ಸ್ಥಳ ಮಹಜರ್ ಮಾಡಿರುತ್ತಾರೆ. ಸಾಕ್ಷಿ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸ್ಥಳ ಮಹಜರ್ ಅನ್ನು ನಿಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3.ಎ. ಎಂದು ಗುರುತಿಸಲಾಯಿತು. ಮಹಜರ್ ಅನ್ನು ಮಧ್ಯಾಹ್ನ 01.00 ರಿಂದ 01.30 ರವೆರೆಗೆ ಜರುಗಿಸಿರುತ್ತಾರೆ. ಮಹಜರ್ ಕಾಲದಲ್ಲಿ ಪೋಲೀಸರು, ನಾನು ಮತ್ತು ನನ್ನ ಅತ್ತೆ ಇದ್ದೇವು. ಮಹಜರ್ ಕಾಲದಲ್ಲಿ ಪೋಲೀಸರು ಒಂದು ಭಾವಚಿತ್ರವನ್ನು ತೆಗೆದಿರುತ್ತಾರೆ ಮತ್ತು ಸ್ಥಳದಿಂದ ಒಂದು ಮದುವೆಯ ಕರೆಯೋಲೆ ಹಾಗೂ ಒಂದು ಭಾವಚಿತ್ರವನ್ನು ತೆಗೆದುಕೊಂಡು ಬಂದರು. ಸಾಕ್ಷಿಯು ಒಂದು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದರಲ್ಲಿ ತಾನು ಇರುವುದಾಗಿ ನುಡಿದಿರುತ್ತಾರೆ. ಸಾಕ್ಷಿಯು ಒಂದು ಮದುವೆಯ ಕರೆಯೋಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಮತ್ತು ನಿಪಿ.5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂತೆ ಪರಿಗಣಿಸುವಂತೆ ಹಾಗೂ ಆಕೆಯನ್ನು ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ನೀಡಲಾಗಿದೆ)

**ಪಾಟಿ ಸವಾಲು ಮಾನ್ಯ ಸ.ಸ.ಅ ರವರಿಂದ**

ಗಲಾಟೆ ದಿ:03.10.2016 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಡೆದಿದೆ ಎಂದರೆ ಸರಿ. ಆರೋಪಿತರು ಬೈದು ಹೊಡೆದಾದ ಮೇಲೆ ನನ್ನನ್ನು ಮನೆಯಿಂದ ಆಚೆ ತಳ್ಳಿದ್ದರು ಎಂದರೆ ಸರಿ.

**ಪಾಟಿ ಸವಾಲು : ಆರೋಪಿ ಪರ ವಕೀಲರಿಂದ**

ನನ್ನ ಮತ್ತು 1 ನೇ ಆರೋಪಿತರ ನಡುವೆ ಮದುವೆ ದಿ:17.05.2010 ರಂದು ಸೋಮೇಶ್ವರ ಕಲ್ಯಾಣ ಮಂಟಪ , ಕೆಂಡಗಣ್ಣಸ್ವಾಮಿ ಸನ್ನಿಧಿ ಗದ್ದಿಗೆಯಲ್ಲಿ ನೆರವೇರಿರುತ್ತದೆ ಎಂದರೆ ಸರಿ. ಮದುವೆಯ ಕಾಲಕ್ಕೆ ಎಲ್ಲಾ ಖರ್ಚು ವೆಚ್ಚಗಳನ್ನು ಆರೋಪಿಗಳೇ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ಸ್ವಲ್ಪ ಹಣವನ್ನು ಆರೋಪಿತರಿಗೆ ಖರ್ಚು ವೆಚ್ಚಗಳಿಗೆ ನೀಡಿದ್ದು ಅವರೇ ಮಿಕ್ಕ ಎಲ್ಲಾ ಖರ್ಚು ವೆಚ್ಚಗಳನ್ನು ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಮದುವೆ ಕಾಲಕ್ಕೆ ಗಂಡಿಗೆ ವಾಚು, ಬಟ್ಟೆ ಹಾಗೂ ಉಂಗುರವನ್ನು ಕೊಡುವುದು ಸರ್ವೆ ಸಾಮಾನ್ಯ ಎಂದರೆ ನಿಜ. ಮದುವೆ ನಂತರ ಸುಮಾರು ಒಂದು ವರ್ಷಗಳ ಕಾಲ ನಾವು ಅನ್ಯೋನ್ಯವಾಗಿದ್ದೇವು. ನಂತರ ನಾನು ಹೇಳಿದ್ದ ಹಾಗೆ ಆರೋಪಿತರು ಕಿರುಕುಳವನ್ನು ನೀಡಿರುವ ಬಗ್ಗೆ ಪೋಲೀಸರಿಗೆ ದೂರನ್ನು ನೀಡಿರಲಿಲ್ಲ ಎಂದರೆ ಸರಿ. 1 ನೇ ಆರೋಪಿಯನ್ನು ನನ್ನ ಕುಟುಂಬದವರ ಒತ್ತಡದ ಮೇರೆಗೆ ಮದುವೆ ಯಾಗಿದ್ದೇನೆ ಎಂದು ನಾನೇ ಆಗಾಗ ಆತನಿಗೆ ಹಿಂತಿರುಗಿಸಿ ಮಾತನಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮದುವೆ ಕಾಲಕ್ಕೆ 1 ನೇ ಆರೋಪಿತನ ತಂದೆ ಮೃತರಾಗಿದ್ದರು. ನನ್ನ ಮದುವೆಯಾದ ಮೇಲೆ 1 ನೇ ಆರೋಪಿತನ ಮನೆಯಲ್ಲಿ ನಾನು ಮತ್ತು ನನ್ನ ಗಂಡ ಮತ್ತು ಆತನ ತಾಯಿ ಮಾತ್ರ ವಾಸ ಮಾಡುತ್ತಿದ್ದೇವು ಎಂದರೆ ಸರಿ. ನನ್ನ ಗಂಡನೇ 2 ನೇ ಆರೋಪಿಯ ಒಬ್ಬನೇ ಮಗ ಎಂದರೆ ಸರಿ. 2 ನೇ ಆರೋಪಿಗೆ ಹುಟ್ಟಿನಿಂದಲೇ ಒಂದು ಕಾಲು ಸ್ವಾಧೀನದಲ್ಲಿಲ್ಲ ಎಂದರೆ ಸರಿ. ಅವರು ಇತ್ತೀಚೆಗೆ ಮಾತ್ರ ಎದ್ದು ಓಡಾಡುತ್ತಿದ್ದಾರೆ ಮೊದಲು ಓಡಾಡಲು ಆಗುತ್ತಿರಲ್ಲಿ ಎಂದರೆ ಸರಿಯಲ್ಲ. 2 ನೇ ಆರೋಪಿ ಹುಟ್ಟಿನಿಂದಲೇ ಅಂಗವಿಕಲರು ಆಗಿದ್ದು ಅವರಿಗೆ ಓಡಾಡಲು ಆಗುತ್ತಿರಲ್ಲಿ ಮಲಗಿದ್ದಲೇ ಎಲ್ಲಾ ರೀತಿಯ ಕಾರ್ಯಗಳನ್ನು ಮಾಡುತ್ತಿದ್ದರು ಮತ್ತು ಮಲ ಮೂತ್ರ ವಿಸರ್ಜನೆ ಸಹ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆಕೆ ಮಲ ಮೂತ್ರ ವಿಸರ್ಜನೆ ಮಲಗಿದ್ದಲಿಯೇ ಮಾಡಿಕೊಳ್ಳುತ್ತಿದ್ದ ಕಾರಣ ನಾನು ಅಸಹ್ಯ ಪಟ್ಟಿಕೊಂಡು ಅವರ ಯೋಗ ಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳುತ್ತಿರಲ್ಲಿ ಎಂದರೆ ಸರಿಯಲ್ಲ. ಸದರಿ ಕಾರಣಕೋಸ್ಕರ ನಾನು ನನ್ನ ಗಂಡನಿಗೆ ಬೇರೆ ಮನೆ ಮಾಡುವಂತೆ ಒತ್ತಾಯ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಕಾರಣಕ್ಕೆ ಮಾತ್ರ ನನ್ನ ಮತ್ತು 1 ನೇ ಆರೋಪಿತನ ನಡುವೆ ಜಗಳ ಆಗುತ್ತಿತ್ತು ಬೇರೆ ಯಾವ ಕಾರಣಕ್ಕೆ ಅಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಕೂಲಿ ಕೆಲಸಕ್ಕೆ ಹೊರ ಹೋದ ಮೇಲೆ ಆತನಿಗೆ ತಿಳಿಸದೇ ನನ್ನ ತವರು ಮನೆಗೆ ಹೋಗುತ್ತಿದ್ದೆ ಎಂದರೆ

ಸರಿಯಲ್ಲ. ಸದರಿ ವಿಚಾರಕ್ಕೆ ನಮ್ಮ ಕುಟುಂಬದವರ ಜೊತೆ ಆರೋಪಿತರ ಕುಟುಂಬದವರು ಮಾತುಕತೆ ನಡೆಸಿದ್ದರು ಎಂದರೆ ಸರಿ. ಸದರಿ ಮಾತುಕತೆಯ ಸಮಯದಲ್ಲಿ 1 ನೇ ಆರೋಪಿತನ ಜೊತೆ ನಾನು ಬಾಳ್ವೆ ಮಾಡುವುದಿಲ್ಲ ಎಂದು ತಿಳಿಸಿದ್ದೇ ಎಂದರೆ ಸರಿಯಲ್ಲ. ನನ್ನ ಮೇಲೆ ಇದ್ದ ಅತಿಯಾದ ಪ್ರೀತಿ ವಾತ್ಸಲ್ಯಕ್ಕಾಗಿ 1 ನೇ ಆರೋಪಿ ಮೈಸೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ಪುನ ಸ್ಥಾಪಿಸುವಂತೆ ನನ್ನ ವಿರುದ್ದ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಮದ್ಯಸ್ಥಿಕೆದಾರರ ಮುಂದೆ ಮತ್ತೆ ನಾವು ವಿವಾಹ ಮುಂದುವರೆಸಲು ಒಪ್ಪಿ ರಾಜೀ ಮಾಡಿಕೊಂಡಿದ್ದೇವು ಎಂದರೆ ಸರಿ. ನಾವು ರಾಜೀ ಮಾಡಿಕೊಂಡ ಮೇಲೆ ಮತ್ತೆ ನಾವು ಬೆಳಗೊಳ ಗ್ರಾಮಕ್ಕೆ ಬಂದು 1 ನೇ ಆರೋಪಿತನ ಜೊತೆ ವಾಸ ಇದ್ದೆ ಎಂದರೆ ಸರಿ. ಆರೋಪಿತನ ಜೊತೆ ವಾಸ ಮಾಡುತ್ತಿದ್ದ ಕಾಲಕ್ಕೆ ನನ್ನ ವ್ಯವಹರಣೆ ಬದಲಾಗದಿದ್ದ ಕಾರಣ ಮತ್ತೆ ಗಲಾಟೆ ಮಾಡಿದ್ದೆ ಎಂದರೆ ಸರಿಯಲ್ಲ. ಆರೋಪಿತರ ಜೊತೆ ಇದ್ದ ಕಾಲದಲ್ಲಿ ವಿನಃಕಾರಣ ಸಣ್ಣ ಸಣ್ಣ ಕಾರಣಕ್ಕೂ ನಾನೇ ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ದಿಃ27.09.2016 ರಂದು ನನ್ನ ಅತ್ತೆಯ ಮೇಲೆ ಗಲಾಟೆ ಮಾಡಿ ಆಕೆಗೆ ಬೈದು ಹೊಡೆದು ಹೇಳದೇ ಕೇಳದೇ 1 ನೇ ಆರೋಪಿಯ ಮನೆಯಿಂದ ತನ್ನ ತವರು ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. 1 ನೇ ಆರೋಪಿತ ನಾನು ಎಲ್ಲಿ ಹೋಗಿದ್ದೇನೆ ಎಂದು ಗೊತ್ತಾಗದೇ ದಿಃ27.09.2016 ರಂದು ಕೆ.ಆರ್.ಎಸ್. ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಈ ಘಟನೆಗಳು ಎಲ್ಲಾ ನಡೆದ ಮೇಲೆ ಸಾಕಷ್ಟು ಬಾರಿ 1 ನೇ ಆರೋಪಿತ ನನ್ನನ್ನು ಮತ್ತೆ ಆತನ ಜೊತೆ ಸಂಸಾರ ನಡೆಸುವಂತೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಆತನ ಜೊತೆ ಹೋಗಲು ನಿರಾಕರಿಸಿದ್ದ ಕಾರಣ ದಿಃ17.10.2016 ರಂದು ತಮ್ಮ ವಕೀಲರ ಮೂಲಕ ನನಗೆ ಒಂದು ತಿಳುವಳಿಕೆ ನೋಟೀಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿತ ನನಗೆ ತಿಳುವಳಿಕೆ ನೋಟೀಸ್ ನೀಡಿದ್ದ ವಿಚಾರ ನನಗೆ ಗೊತ್ತು , ಆ ವಿಚಾರ ಗೊತ್ತಾದ ಮೇಲೆ ನಾನು ಆರೋಪಿತರ ವಿರುದ್ದ ನಿಪಿ.2 ರಂತೆ ದೂರನ್ನು ಕೆ.ಆರ್.ಎಸ್.ಠಾಣೆಯಲ್ಲಿ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೊತೆ ವಿವಾಹ ಮುಂದುವೆರಸಲು ಸಾಧ್ಯವಾಗದ ಕಾರಣ 1 ನೇ ಆರೋಪಿತ ನನ್ನ ವಿರುದ್ದ ಮೈಸೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿ. ದಿಃ04.10.2018 ರಂದು ಸದರಿ ಅರ್ಜಿಯನ್ನು ನ್ಯಾಯಾಲಯ ಮಾನ್ಯ ಮಾಡಿದೆ ಎಂದರೆ

ಸರಿ. ನಾನು ದೂರು ನೀಡಿದ ಮೇಲೆ ಪೋಲೀಸ್ ಠಾಣೆಯಿಂದ ಮಹಿಳಾ ಮತ್ತು ಮಕ್ಕಳ ಆಯೋಗ ನಿಯೋಜಕರಲ್ಲಿಗೆ ಮಧ್ಯಸ್ಥಿಕೆಗಾಗಿ ನನ್ನನ್ನು ಕಳುಹಿಸಿದ್ದರು ಎಂದರೆ ಸರಿ. ಅಲ್ಲಿ ಮಧ್ಯಸ್ಥಿಕೆ ಫಲಪ್ರದ ವಾಗದಿದ್ದ ಕಾರಣ ನ್ಯಾಯಾಲಯದಲ್ಲಿ ವ್ಯಾಜ್ಯ ಬಗೆಹರಿಸಿಕೊಳ್ಳಿ ಎಂದು ಹೇಳಿ ಕಳುಹಿಸಿರುತ್ತಾರೆ ಎಂದರೆ ಸರಿ. ಸದರಿ ದಿನ ನಾನು ನನ್ನ ಅತ್ತೆಗೆ ಬೈದು ಹೊಡೆದು ತಳ್ಳಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರದ ಕಾರಣ ಆರೋಪಿತರು ನನ್ನ ಮತ್ತು ನನ್ನ ತಂದೆ ತಾಯಿ ವಿರುದ್ದ ಶ್ರೀರಂಗಪಟ್ಟಣದ ಪೋಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ ಎಂದರೆ ನಿಜ. ಸದರಿ ವಿಚಾರಕ್ಕೆ ಪೋಲೀಸ್ ನವರು ನನ್ನನು ಕರೆದು ತಿಳುವಳಿಕೆ ಹೇಳಿ ಕಳುಹಿಸಿದ್ದರು ಎಂದರೆ ಸರಿಯಲ್ಲ. ನಿಪಿ.3 ಮಹಜರ ಅನ್ನು ನಾನು ಓದಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಮಾನಸಿಕವಾಗಿ ಕಿರುಕುಳ ನೀಡಿದ್ದೇನೆ ಮತ್ತು ಅವರನ್ನು ಮಾನಸಿಕವಾಗಿ ಕುಗ್ಗಿಸಲು ಈ ದೂರನ್ನು ನೀಡಿಲಾಗಿದೆ ಎಂದರೆ ಸರಿಯಲ್ಲ. ನಾನು ನನ್ನ ಅತ್ತೆಯ ಯೋಗಕ್ಷೇಮ ವನ್ನು ನೋಡಿಕೊಳ್ಳದಿದ್ದ ಕಾರಣವಾಗಿ ವಿವಾದ ಉದ್ಭವಾಗಿದ್ದು ನಾನು ಹೇಳಿದಂತೆ ಯಾವುದೇ ವರದಕ್ಷಿಣೆ ಕಿರುಕುಳಕ್ಕೆ ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.